



ಅರಳಿಸುವ ಕಥೆ 'ಅನುರಾಗ ಅರಳಿತು' ಚಿತ್ರದ್ದು. ತಮಿಳು, ತೆಲುಗು ಹಾಗೂ ಹಿಂದಿ ಭಾಷೆಗಳಲ್ಲಿ ರೀಮೇಕ್ ಆದ ಈ ಸಿನಿಮಾ ತೆರೆಕಂಡಾಗಲೆಲ್ಲ ಯಶಸ್ಸು ಕಂಡಿರುವ ಸಿನಿಮಾ. ಈ ಎರಡು ಸಿನಿಮಾಗಳನ್ನು ನಿರ್ದೇಶಕರಾಗಿ ರಾಜಶೇಖರ್ ಅವರ ಕಸುಬುದಾರಿಕೆಯ ಉದಾಹರಣೆಗಳಾಗಿ ನೋಡಬಹುದು.

ರಾಜಕುಮಾರ್ ಮಾತ್ರವಲ್ಲ – ಅವರ ಪುತ್ರರಾದ ಶಿವರಾಜ್ ಹಾಗೂ ರಾಘವೇಂದ್ರರ ವೃತ್ತಿಜೀವನದ ಆರಂಭದ ಚಿತ್ರಗಳನ್ನು ನಿರ್ದೇಶಿಸಿದ ಅಗ್ಗಳಿಕೆಯೂ ರಾಜಶೇಖರ್ ಅವರಿಗೆ ಸಲ್ಲಬೇಕು. ಅವರು ನಿರ್ದೇಶಿಸಿದ, ಶಿವರಾಜ್‌ಕುಮಾರ್ ನಟನೆಯ ಎರಡು ಮತ್ತು ಮೂರನೇ ಚಿತ್ರಗಳಾದ 'ರಥಸಪ್ತಮಿ' ಹಾಗೂ 'ಮನಮೆಚ್ಚಿದ ಹುಡುಗಿ' ಬೆಳ್ಳಿಹಬ್ಬ ಆಚರಿಸಿದ್ದವು. 'ಅದೇ ರಾಗ ಅದೇ ಹಾಡು', 'ಆಸೆಗೊಬ್ಬ ಮೀಸೆಗೊಬ್ಬ', 'ಮೋಡದ ಮರೆಯಲ್ಲಿ', 'ಚಿರ ಬಾಂಧವ್ಯ', 'ಮುತ್ತಣ್ಣ', 'ಸವ್ಯಸಾಚಿ', 'ಮನ ಮಿಡಿಯಿತು' – ಹೀಗೆ ಶಿವಣ್ಣನವರ ಸಾಲು ಸಾಲು ಚಿತ್ರಗಳನ್ನು ನಿರ್ದೇಶಿಸಿದ ಅಗ್ಗಳಿಕೆ ಅವರದು. ರಾಘವೇಂದ್ರ ರಾಜ್‌ಕುಮಾರ್ ಅವರ ಎರಡು ಹಾಗೂ ಮೂರನೇ ಸಿನಿಮಾಗಳಾದ 'ನಂಜುಂಡಿ ಕಲ್ಯಾಣ' ಹಾಗೂ 'ಗಜಪತಿ ಗರ್ವಭಂಗ' ಸಾರಥ್ಯವೂ ಅವರದ್ದೇ.

ಮಾಲಾಶ್ರೀ ಅವರ ಹೆಸರಿನೊಂದಿಗೆ ತಳಕು ಹಾಕಿಕೊಂಡ 'ಕನಸಿನ ರಾಣಿ' ಎನ್ನುವ ವಿಶೇಷಣದ ಚಿತ್ರದ ನಿರ್ದೇಶನವೂ ಎಂ.ಎಸ್.ಆರ್. ಅವರದೇ. 'ಹೃದಯ ಹಾಡಿತು', 'ಮಣ್ಣಿನ ದೋಣಿ' ಅವರ ನಿರ್ದೇಶನದ ಇನ್ನೆರಡು ಪ್ರಸಿದ್ಧ ಸಿನಿಮಾಗಳು.

ಕಾದಂಬರಿ ಆಧಾರಿತ ಸಿನಿಮಾಗಳನ್ನು ಮಾಡಿದಂತೆ ಕೆಲವು ರೀಮೇಕ್ ಚಿತ್ರಗಳನ್ನೂ ಅವರು ನಿರ್ದೇಶಿಸಿದ್ದಿದೆ. ವೃತ್ತಿಜೀವನದ ಕೊನೆಯ ದಿನಗಳಲ್ಲಿ ಹೆಚ್ಚು ರೀಮೇಕ್ ಮಾಡುವ ಅನಿವಾರ್ಯತೆ ಅವರಿಗೆ ಎದುರಾದಂತೆ ಕಾಣುತ್ತದೆ. ಆದರೆ, ಅವರು ರೀಮೇಕ್ ಮಾಡಿದ 'ಮೋಡದ ಮರೆಯಲ್ಲಿ' ಸಿನಿಮಾ ರೀಮೇಕ್ ಪ್ರಕ್ರಿಯೆಗೇ ಗೌರವ ತರುವ ಪ್ರಯತ್ನದಂತಿತ್ತು ಎನ್ನುವುದನ್ನು ಗುರ್ತಿಸಬೇಕು. ಇಂದಿಗೂ ಶಿವರಾಜ್ ಅವರ ವೃತ್ತಿಜೀವನದ ಅತ್ಯುತ್ತಮ ಚಿತ್ರಗಳನ್ನು ಗುರ್ತಿಸುವಾಗ 'ಮೋಡದ ಮರೆಯಲ್ಲಿ' ಮರೆತು ಮುಂದಕ್ಕೆ ಸಾಗಲಾಗದು.

ಎಂ.ಎಸ್.ಆರ್. ನಿರ್ದೇಶನದ ಮೂವತ್ತಕ್ಕೂ ಹೆಚ್ಚು ಸಿನಿಮಾಗಳ ಪಟ್ಟಿಯನ್ನು ನೋಡಿದರೆ ಅದರಲ್ಲಿ ಎದ್ದುಕಾಣಿಸುವುದು ರಾಜ್‌ಕುಮಾರ್ ಕುಟುಂಬಕ್ಕಾಗಿ ರೂಪಿಸಿದ ಚಿತ್ರಗಳು. ಅವರ ಬಹು ಯಶಸ್ವೀ ಚಿತ್ರಗಳು ಕೂಡ ಇವೇ ಆಗಿವೆ. 'ರಾಜಕುಮಾರ್ ಕಂಪನಿಯ ನಿರ್ದೇಶಕ' ಎನ್ನುವ ವಿಶೇಷಣವೇ ಎಂ.ಎಸ್. ರಾಜಶೇಖರ್ ಅವರ ಶಕ್ತಿ ಮತ್ತು ಮಿತಿ ಎರಡೂ ಆಗಿದೆ.

ರಾಜಶೇಖರ್ ಅವರ ತಂದೆ ಸುಬ್ಬಣ್ಣನವರು ಮೇಕಪ್ ಕಲಾವಿದರಾಗಿ ಚಿತ್ರರಂಗದಲ್ಲಿ ಪ್ರಸಿದ್ಧರಾಗಿದ್ದವರು. ಕೆಲವು ಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲೂ ನಟಿಸಿದ್ದಾರೆ. ಅಪ್ಪನ ಸಿನಿಮಾ ನಂಟು ಮಗನಿಗೂ ಬಂತು. ಅಪ್ಪನ ಮೂಲಕ ರಾಜ್ ಕ್ಯಾಂಪ್ ಸೇರಿಕೊಂಡ ಅವರು, ಅಲ್ಲಿ ಸಿನಿಮಾಕ್ಕೆ ಸಂಬಂಧಿಸಿದ ಎಲ್ಲ ಕ್ಷೇತ್ರಗಳಲ್ಲೂ ಕೆಲಸ ಮಾಡಿದರು. ಹೀಗೆ ಸುಮಾರು ಒಂದೂವರೆ ದಶಕಕ್ಕೂ ಹೆಚ್ಚಿನ ಕಾಲ ಕೆಲಸ ಮಾಡಿದ್ದಕ್ಕೆ ಫಲ ಎನ್ನುವಂತೆ ದೊರೆತ ಅವಕಾಶ 'ಧ್ರುವತಾರೆ' (1987) ಚಿತ್ರದ ನಿರ್ದೇಶನ. ಸ್ವತಂತ್ರವಾಗಿ ನಿರ್ದೇಶಿಸಿದ ಚೊಚ್ಚಿಲ ಸಿನಿಮಾವೇ ದ್ವಿತೀಯ ಅತ್ಯುತ್ತಮ ಚಿತ್ರ ರಾಜ್ಯಪ್ರಶಸ್ತಿ ಪಡೆದುದು ರಾಜಶೇಖರ್ ಪ್ರತಿಭೆಗೆ ಸಂದ ಗೌರವದಂತಿತ್ತು.

ರಾಜಶೇಖರ್ ನಿರ್ದೇಶನದ ರಾಜಕುಮಾರರ ಎರಡೂ ಸಿನಿಮಾಗಳು ದೊಡ್ಡ ಯಶಸ್ಸನ್ನು ಗಳಿಸಿದರೂ ನಂತರದಲ್ಲಿ ಅವರಿಗೆ ರಾಜ್ ಸಿನಿಮಾ ನಿರ್ದೇಶಿಸುವ ಅವಕಾಶ ದೊರೆಯಲಿಲ್ಲ. ಆ ವೇಳೆಗೆ ರಾಜ್‌ಪುತ್ರರ ಕಾಲ ಶುರುವಾದುದರಿಂದ ಕರಿಯರನ್ನು ರೂಪಿಸುವ ಹೊಣೆ ರಾಜಶೇಖರ್ ಅವರಿಗೆ ದೊರೆತಿರಬಹುದು ಎನ್ನುವುದಕ್ಕೆ ಅವರು ನಿರ್ದೇಶಿಸಿರುವ ಶಿವಣ್ಣ–ರಾಘಣ್ಣನ ಸಾಲು ಸಾಲು ಚಿತ್ರಗಳೇ ಉದಾಹರಣೆಯಂತಿವೆ. ಯುವ ತಲೆಮಾರಿನ ನಾಡಿಮಿಡಿತವನ್ನು ಅರಿಯುವ ಕಲೆ ನಿರ್ದೇಶಕರಾಗಿ ಅವರಿಗೆ ಸಿದ್ಧಿಸಿತ್ತು ಎನ್ನುವುದಕ್ಕೆ ಅವರ ಚಿತ್ರಗಳು ಗಳಿಸಿದ ಗೆಲುವು ಉದಾಹರಣೆಯಂತಿದೆ.

ಎಂ.ಎಸ್.ಆರ್. ಅವರ ಎಲ್ಲ ಸಿನಿಮಾಗಳಲ್ಲಿ ಎದ್ದುಕಾಣುವ ಗುಣ ಸದಭಿರುಚಿ. ಅವರ ಚಿತ್ರಗಳಲ್ಲಿ ಗಲೀಜು ಹಾಸ್ಯ ಕಾಣಿಸುವುದಿಲ್ಲ. ಸಾಹಿತ್ಯಕೃತಿಗಳನ್ನು ಆಧರಿಸಿದ ಚಿತ್ರಗಳನ್ನು ಗಮನಾರ್ಹ ಸಂಖ್ಯೆಯಲ್ಲಿ ನಿರ್ದೇಶಿಸಿದ್ದು ಅವರ ಇನ್ನೊಂದು ಸಾಧನೆ. ಕನ್ನಡ ಚಿತ್ರರಂಗದಲ್ಲಿ ನಿರ್ದೇಶಕರ ಜೀವಮಾನದ ಸಾಧನೆಗೆ ದೊರೆಯುವ ಅತ್ಯುತ್ತಮ ಗೌರವ 'ಪುಟ್ಟಣ್ಣ ಕಣಗಾಲ್ ಪ್ರಶಸ್ತಿ'. ನಿರ್ದೇಶಕರಾಗಿ ಪುಟ್ಟಣ್ಣನವರ ಆಶಯಗಳ ಮುಂದುವರಿಕೆಯಂತೆ ಕಾಣಿಸುವ ರಾಜಶೇಖರ್ ಅವರಿಗೆ ಪ್ರಶಸ್ತಿಯ ಗೌರವ ಕೊನೆಗೂ ಸಿಗಲಿಲ್ಲ.

ರಾಜಶೇಖರ್ ನಿಧನದೊಂದಿಗೆ ಕನ್ನಡ ಚಿತ್ರರಂಗದ ಸದಭಿರುಚಿಯ ಅಧ್ಯಾಯವೊಂದು ಕೊನೆಗೊಂಡಂತಾಗಿದೆ. ಆದರೆ, ಅವರು ರೂಪಿಸಿದ 'ಧ್ರುವತಾರೆ', 'ಅನುರಾಗ ಅರಳಿತು', 'ರಥಸಪ್ತಮಿ', 'ಮನಮೆಚ್ಚಿದ ಹುಡುಗಿ', 'ನಂಜುಂಡಿ ಕಲ್ಯಾಣ' ಚಿತ್ರಗಳೇ ಸಾಕು, ಅವರ ಹೆಸರನ್ನು ಕನ್ನಡ ಸಿನಿಮಾ ಇತಿಹಾಸದಲ್ಲಿ ಚಿರಸ್ಥಾಯಿಯಾಗಿಸಲು.